ಇಡ್ಲಿ, ಒಂದು ವಡೆ, ಸಾಂಬಾರ್, ಚಟ್ನಿ ತಿಂದು ಒಂದು ಲೋಟ ಕಾಫಿ ಕುಡಿದೆ. ಕೌಂಟರ್ ಬಳಿ ಬಿಲ್ ಪಾವತಿ ಮಾಡುತ್ತಿದ್ದಾಗ ಹಣ ತೆಗೆದುಕೊಳ್ಳುತ್ತಿದ್ದ ನರಪೇತಲುವನ್ನು ಕೇಳಿದೆ: 'ಇಲ್ಲಿ ವಾಸವಿ ಕನ್ನಿಕಾ ದೇವಿಯ ದೇವಸ್ಥಾನಕ್ಕೆ ಹೋಗುವ ದಾರಿ ಯಾವುದು?'

'ವಾಸವಿ ಕನ್ನಿಕಾದೇವಿಯ ದೇವಸ್ಥಾನಕ್ಕಾ? ಹೀಗೇ ಈ ಎದುರು ರಸ್ತೆಯಲ್ಲಿ ಹೋಗಿ, ಬಲಕ್ಕೆ ತಿರುಗಿ. ಸೀದಾ ದೇವಸ್ಥಾನಕ್ಕೆ ಹೋಗುತ್ತದೆ' ಎಂದ ಆತ, 'ಏನು ದೇವಿಯ ದರ್ಶನಕ್ಕೆ ಬಂದದ್ದಾ? ಅಥವಾ ಅಲ್ಲಿ ಯಾರನ್ನಾದರೂ ಭೇಟಿ ಮಾಡಬೇಕಿತ್ತಾ?' ಕೇಳಿದ.

'ಆ ದೇವಸ್ಥಾನದ ಸಮೀಪ ಆಂಜನೇಯಪ್ಪ ಅಂತ ಒಬ್ಬರು ಮೇಷ್ಟ್ರು' ನಾನು ಅನ್ನುತ್ತಿದ್ದಂತೆಯೇ ಆತ ನಡುವೆಯೇ ತಡೆದು, 'ಅವರೆಲ್ಲಿದ್ದಾರೆ ಆಂಜನೇಯಪ್ಪ ಮೇಷ್ಟ್ರು? ಅವರು ತೀರಿಕೊಂಡು ನಾಲ್ಕಾರು ವರ್ಷ ಆಯಿತು. ಅವರ ಮಗ ಅದೇ ಶ್ರೀಕಂಠಪ್ಪ ಈಗ ಜೂಲಾಜಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿದ್ದಾರೆ. ಅದೆಲ್ಲೋ ಕೊಳ್ಳೆಗಾಲವೋ ಮತ್ತೆಲ್ಲಿಯೋ ಇದ್ದಾನಂತೆ. ಮತ್ತೊಬ್ಬ ಮಗ ಶಿವೂ ಅಂತ... ಆತ ಆ್ಯಕ್ಸಿಡೆಂಟ್‌ನಲ್ಲಿ ತೀರಿಕೊಂಡುಬಿಟ್ಟ' ಎಂದ.

'ಪ್ಚ... ಪ್ಚ...' ಪಶ್ಚಾತ್ತಾಪ ಸೂಚಿಸಿದ ನಾನು, 'ಆ ಮೇಷ್ಟ್ರ ಹೆಂಡತಿ... ಮಗಳು?' ಕೇಳಿದೆ.

'ಗಂಡನಿಗಿಂತಾ ಮೊದಲೇ ಹೆಂಡತಿ ಶಿವನ ಪಾದ ಸೇರಿದರಲ್ಲಾ... ಅವರ ಮಗಳು...

